ಶ್ರೀ ಕೆ. ಕಂಶಾಲ.—ತರಬೇತಿ ಕೊಟ್ಟವರಿಗೇ ತರಬೇತಿ ಕೊಡುತ್ತಿದ್ದಾರೆ. ಆದ್ದರಿಂದ ಕೇಂದ್ರ ವನ್ನು ವಿತಕ್ಕೆ ಪರ್ಗಾವಣೆ ಮಾಡಬಾರದು ?

ಶ್ರೀ ಜೆ. ಬಸವಣ್ಣಪ್ಪ.—ತರಬೇತಿ ಕೊಟ್ಟವರಿಗೇ ಕೊಡುತ್ತಿದ್ದಾರೆ ಎಂಬುದು ಸತ್ಯಕ್ಕೆ ದೂರ ವಾದ ಮಾತು. ಜಿಲ್ಲೆಯ ಎಲ್ಲ ಭಾಗಗಳಲ್ಲಿರತಕ್ಕ ಎಲಿಜಿಬಲ್ ಕ್ಯಾಂಡಿಡೇಟ್ಸ್‌ಗೆ ಅವಕಾಶ ಕೊಡುವುದಕ್ಕೆ ಸೂಕ್ತ ಆದೇಶ ಕೊಡುವುದಲ್ಲದೆ ಹೊರಗಡೆಯಿಂದ ಬಂದವರಿಗೆ ವಸತಿ ಸೌಲಭ್ಯಕ್ಕೂ ಅವಕಾಶ ಮಾಡಿಕೊಡಲಾಗುವುದು.

ಕಾಪು ಕ್ಷೇತ್ರದ ಗ್ರಾಮಾಂತರ ಪ್ರದೇಶದಲ್ಲಿ ವಾಸಿಸುತ್ತಿರುವವರಿಗೆ ಹಕ್ಕು ಪತ್ರ ನೀಡುವ ಬಗ್ಗೆ.

೧೧೦೭. ವಸಂತ ವಿ. ಸಾಲಿಯಾನ(ಕಾಪು).—ಮಾನ್ಯ ಕಂದಾಯ, ಯೋಜನಾ ಹಾಗೂ ಕಾರ್ಮಿಕ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕಳೆದ ಮೂರು ವರ್ಷಗಳಲ್ಲಿ ಕಾಪು ಕ್ಷೇತ್ರದ ಗ್ರಾಮಾಂತರ ಪ್ರದೇಶಗಳಲ್ಲಿ ೩ ಸೆಂಟ್ಸ್, ೫ ಸೆಂಟ್ಸ್ ಗಳಷ್ಟು ಸರಕಾರಿ ಜಾಗದಲ್ಲಿ ಸಣ್ಣ ಗುಡಿಸಲು ಕಟ್ಟಿ ಹಕ್ಕು ಪತ್ರಕ್ಕಾಗಿ ಅರ್ಜಿ ಸಲ್ಲಿಸಿರುವವರ ಸಂಖ್ಯೆ ಎಷ್ಟು ?

ಆ) ಅವರಿಗೆ ಹಕ್ಕು ಪತ್ರಗಳನ್ನು ನೀಡಲು ಸರ್ಕಾರದವರು ಯಾವ ಕ್ರಮ ಕೈಗೊಂಡಿದ್ದಾರೆ ?

ಶ್ರೀ ಎಸ್. ಆರ್. ಬೊಮ್ಮಾಯಿ(ಕಂದಾಯ, ಯೋಜನಾ ಹಾಗೂ ಕಾರ್ಮಿಕ ಸಚಿವರು).—

ಅ) ಕಳೆದ ಮೂರು ವರ್ಷಗಳಲ್ಲಿ ಕಾಪು ಕ್ಷೇತ್ರದ ಗ್ರಾಮಾಂತರ ಪ್ರದೇಶಗಳಲ್ಲಿ ಹಕ್ಕು ಪತ್ರಕ್ಕಾಗಿ ಅರ್ಜಿ ಸಲ್ಲಿಸಿರುವವರ ಸಂಖ್ಯೆ ೩೧೭.

ಆ) ಆ ೩೧೭ ಜನರ ಪೈಕಿ ೨೦೮ ಮಂದಿ ನಿವೇಶನ ರಹಿತರಿಗೆ ಈಗಾಗಲೇ ಹಕ್ಕು ಪತ್ರ ನೀಡ ಲಾಗಿದೆ ಉಳಿದ ೧೦೯ ಜನರಿಗೆ ಮನೆ ನಿವೇಶನ ನೀಡುವುದಕ್ಕೆ ಕ್ರಮ ತೆಗೆದುಕೊಳ್ಳ ಲಾಗಿದೆ.

ಶ್ರೀ ವಸಂತ ವಿ. ಸಾಲಿಯಾನ.—ಸನ್ಮಾನ್ಯ ಅಧ್ಯಕ್ಷರೆ, ಕೆಲವು ಸಂದರ್ಭದಲ್ಲಿ ವಿನಾಗಂತ್ತಿದೆ ಯೆಂದರೆ ಅರ್ಜಿಗಳು ವಿಲೇಜ್ ಅಕೌಂಟೆಂಟ್, ಮತ್ತೆ ರೆವಿನ್ಯೂ ಇನ್‌ಸ್ಪೆಕ್ಟರ್ ಮಂತ್ರಿ ತಹಸೀಲ್ದಾರರ ಹತ್ತಿರ ಇರುತ್ತದೆ. ಇದರಲ್ಲಿ ಅಂಕಿ ಸಂಖ್ಯೆಗಳನ್ನು ಕೊಟ್ಟಿದ್ದಾರೆ. ಸಾಧ್ಯವಾದ ಮಟ್ಟಿಗೆ ಇದು ಸರಿ ಯಾಗಿದೆ. ೧೯೭೪ನೇ ಇಸವಿಯಿಂದ ಕೆಲವು ಅರ್ಜಿಗಳು ಸುಮಾರು ೧೦೦ಕ್ಕಿಂತ ಹೆಚ್ಚು ಅರ್ಜಿಗಳು ಪೆಂಡಿಂಗ್ ಇವೆ. ಅವರು ಕೃಷಿ ಮಾಡಿಕೊಂಡು ತೆಂಗಿನಮರ ಎಲ್ಲಾ ಇಟ್ಟಿದ್ದಾರೆ. ೧೯೭೪ನೇ ಇಸವಿ ಯಿಂದ ಇದ್ದುಕೊಂಡು ಸರ್ಕಾರದ ಗಮನಕ್ಕೆ ತಂದರೂ ಕೂಡ ಹಕ್ಕುಪತ್ರಗಳನ್ನು ಯಾರಿಗೆ ಕೊಡ ಲಿಲ್ಲವೋ ಅಂಥವರಿಗೆ ದಯವಿಟ್ಟು ಕೊಡಬೇಕು. ಈ ಬಗ್ಗೆ ಕ್ರಮ ತೆಗೆದುಕೊಳ್ಳಬೇಕಾಗಿ ಕೇಳಿ ಕೊಳ್ಳುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ.—೧೯೭೪ ರಿಂದ ಅರ್ಜಿ ಉಳಿಯಬಾರದಿತ್ತು. ಉಳಿದಿದ್ದರೆ ಕೂಡಲೇ ಕೊಡುವುದಕ್ಕೆ ಕ್ರಮ ತೆಗೆದುಕೊಳ್ಳುತ್ತೇನೆ.

ಪ್ರಶ್ನೆ ಸಂಖ್ಯೆ ೪೦೦ (ಲಿಖಿತ) ಸದಸ್ಯರು ಹಾಜರಿರಲಿಲ್ಲ.

ಕರ್ನಾಟಕ ಅಲ್ಪ ಸಂಖ್ಯಾತರ ಹಣಕಾಸು ನಿಗಮ

೧೩೪೪. ಶ್ರೀ ಮೊಹಮ್ಮದ್ ಲೇಕ್ಕುದ್ದೀನ್ (ಬೀದರ್).— ಮಾನ್ಯ ಸಮಾಜ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕರ್ನಾಟಕ ಅಲ್ಪ ಸಂಖ್ಯಾಂತರ ಹಣಕಾಸು ನಿಗಮಕ್ಕೆ ಸರ್ಕಾರದವರು ಒಂದು ಕೋಟಿ ರೂ. ಮೂಲ ಧನವನ್ನು ಕೊಡಲು ಒಪ್ಪಿದ್ದು ಈ ಮೊತ್ತ ಬಿಡುಗಡೆ ಮಾಡಿಲ್ಲದಿರುವುದಿಲ್ಲ ಎನ್ನುವುದು ವಾಸ್ತವಿಕವಾಗಿಲ್ಲವೇ, ಹಾಗಿದ್ದಲ್ಲಿ ಯಾವಾಗ ಬಿಡುಗಡೆ ಮಾಡಲಾಗುವುದು.